

ಪಿ. ರಾಜಗೋಪಾಲ್ ಮತ್ತು ಹೆನ್ನೆ ಡಿ. ಬ್ರೂನ್

ಕೆಲವು ವಿಚಾರಗಳನ್ನು ಬಾಯಿಪಾಠ ಮಾಡಿಕೊ' ಎಂದು ಅಪ್ಪ ನನಗೆ ಸಲಹೆ ಕೊಡುತ್ತಿದ್ದರು. ತಂಡದಲ್ಲಿ ಕಲಾವಿದರು ಯಾರಾದರೂ ಗೈರಾದರೆ, ಆ ಪಾತ್ರವನ್ನು ನಾನು ನಿಭಾಯಿಸಬಹುದು ಎಂಬ ಉದ್ದೇಶ ಅಪ್ಪನದ್ದಾಗಿತ್ತು. ಹೀಗಾಗಿ ನಾನು ಪ್ರಸಿದ್ಧ ಕಲಾವಿದರ, ಹಿರಿಯ ಕಲಾವಿದರ ಪ್ರದರ್ಶನವನ್ನು, ಅವರ ಜ್ಞಾನವನ್ನು ಗಮನವಿಟ್ಟು ನೋಡುವುದನ್ನು ರೂಢಿಮಾಡಿಕೊಂಡೆ. ಹೀಗೆ ತಂಡವೊಂದನ್ನು ನಿಭಾಯಿಸುವಾಗ ಕಲಾರಾಧನೆ ಎಷ್ಟು ಮುಖ್ಯವೋ, ಕಲಾವಿದರ ಪಾಲಿಗೆ ಅದೊಂದು ವೃತ್ತಿಯೆನ್ನುವುದನ್ನೂ ಮರೆಯುವಂತಿಲ್ಲ. ಅಂತಿಮವಾಗಿ ತಂಡದಲ್ಲಿರುವ ಸದಸ್ಯರ ಜೀವನ ಸಾಗಬೇಕಲ್ಲ! ಆ ನಿಟ್ಟಿನಲ್ಲಿ ಎಲ್ಲ ಮುನ್ನೆಚ್ಚರಿಕೆಯನ್ನೂ ಅಪ್ಪ ತೆಗೆದುಕೊಳ್ಳುತ್ತಿದ್ದರು ಅನಿಸುತ್ತದೆ. ಅವರಿಂದ ನಾನು ಕಲಿತದ್ದು ತುಂಬಾ. ವೇದಿಕೆಯ ಮೇಲಿದ್ದಾಗ ಪ್ರೇಕ್ಷಕರಿಗೆ ನಮ್ಮ ಶ್ರಮವೇನೂ ಕಾಣಬಾರದು, ಅನ್ನದಾತರಾದ ಅವರನ್ನು ಹಸನ್ಮುಖತೆಯಿಂದ ಇದಿರುಗೊಳ್ಳಬೇಕು ಎನ್ನುವುದು ಅವರ ತತ್ವವಾಗಿತ್ತು.

ಕಟ್ಟೈಕೂತ್ತು ಮಹಾಭಾರತ ಕಥೆಯನ್ನು ಪ್ರಧಾನವಾಗಿ ಆಧರಿಸಿದ ಕಲಾಪ್ರಕಾರ. ಇತರ ಕಥೆಗಳನ್ನು ಕೂಡ ಪ್ರಸ್ತುತಪಡಿಸುತ್ತೇವೆ. ದ್ರೌಪದಿ ವಸ್ತ್ರಾಪಹರಣ, ಕೃಷ್ಣಸಂಧಾನ, ದುಶ್ಯಾಸನ ವಧೆ, ಭೀಮ–ದುರ್ಯೋಧನ ಕಾಳಗ... ಹೀಗೆ. ನಾನು ಇನ್ನೂ ಅನೇಕ ಕಥೆಗಳನ್ನು ಕಟ್ಟೈಕೂತ್ತುಗೆಂದೇ ಬರೆದಿರುವೆ. ಪ್ರಹ್ಲಾದನ ಪಾತ್ರದ ಚಿತ್ರಣವನ್ನು ನನಗಾಗಿ ಅಪ್ಪನೇ ಬರೆದಿದ್ದರು. ಆದರೆ ನನಗೋ ಕರ್ಣನ ಪಾತ್ರವೆಂದರೆ ಬಹಳ ಇಷ್ಟ. ಇಷ್ಟಕಷ್ಟಗಳೇನೇ ಇರಲಿ, ನನ್ನ ಅಪ್ಪ ಅಗಲಿ ಹೋದಾಗ ಇಡೀ ತಂಡವೇ ಆತಂಕವನ್ನು ಎದುರಿಸಿತು. ಆಗ ತಂಡದ ಜವಾಬ್ದಾರಿಯನ್ನು ನಾನು ಅನಿವಾರ್ಯವಾಗಿ ವಹಿಸಿಕೊಳ್ಳಬೇಕಾಯಿತು.

**◆ ತಂಡವು ನಿಮ್ಮ ಕೈಗೆ ಬಂದ ಮೇಲೆ ನೀವು ಪ್ರದರ್ಶನ ವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಿದ್ದೀರಾ?**

ಹೌದು. ಕಾಲವುರುಳಿದಂತೆ ಜನರ ಅಪೇಕ್ಷೆಗಳೂ ಬದಲಾಗುತ್ತವೆ. ಈಗಿನ ತಲೆಮಾರಿನವರು ವೇಗವನ್ನು ಬಯಸುತ್ತಾರೆ. ಎಲ್ಲವನ್ನೂ ವಾಚ್ಯವಾಗಿ ಕೇಳಲು ಬಯಸುತ್ತಾರೆ. ಆದರೆ ಅಪ್ಪನ ಕಾಲದಲ್ಲಿದ್ದ ಪ್ರೇಕ್ಷಕರು ಹಾಗಲ್ಲ. ಅವರು ಕಾವ್ಯವನ್ನು ಇಷ್ಟಪಡುತ್ತಿದ್ದರು. ಪಾತ್ರಧಾರಿಯು ದೀರ್ಘವಾದ ಹಾಡುಗಳನ್ನು ಹಾಡಿದರೆ ಬಹಳ ಮೆಚ್ಚಿಕೊಳ್ಳುತ್ತಿದ್ದರು.

ಆದ್ದರಿಂದ ಒಂದು ಕಥಾಭಾಗಕ್ಕೆ ಸಂಬಂಧಿಸಿದ